# Andolana

**Date:** 28-02-2017 **Page No. 05**

Edition: Mysore **Language: Kannada**

## ಎಷ್ಟೇ ಕಷ್ಟ ಬಂದರೂ ಅಂಜದೆ ಗುರಿ ಸಾಧಿಸಿ

### 'ಸ್ಪೋರ್ಟ್ಸ್ ಟಾಕ್' ಕಾರ್ಯಕ್ರಮದಲ್ಲಿ ಸೋಮ್‌ದೇವ್ ದೇವವರ್ಮನ್




ಮೈಸೂರು,ಫೆ.೨೭-ಜೀವನದಲ್ಲಿ ಎಷ್ಟೇ ಕಷ್ಟದ ಪರಿಸ್ಥಿತಿಗಳು ಬಂದರೂ ಅಂಜದೆ ಗುರಿ ಸಾಧಿಸಬೇಕು ಎಂದು ಮಾಜಿ ಟೆನಿಸ್ ಆಟಗಾರ ಸೋಮ್‌ದೇವ್ ದೇವವರ್ಮನ್ ತಿಳಿಸಿದರು.

ಶ್ರೀ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಹಾಗೂ ಸೆಂಟರ್ ಫಾರ್ ಸ್ಪೋರ್ಟ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಹಯೋಗದಲ್ಲಿ ಎಸ್‌ಡಿಎಂಐಎಂಡಿ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಸ್ಪೋರ್ಟ್ಸ್ ಟಾಕ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರೀಡಾ ಜಗತ್ತಿನಲ್ಲಿ ನಿರ್ವಹಣೆ ಮತ್ತು ವೃತ್ತಿಪರತೆ ಅವಶ್ಯಕತೆ ಇದೆ.

ಡಿಜಿಟಲ್ ತಂತ್ರಜ್ಞಾನದ ಸಹಾಯದಿಂದ ೨೦೧೨ರ ನಂತರ ಕ್ರೀಡಾ ಜಗತ್ತಿನಲ್ಲಿ ಲೀಗ್ ಪಂದ್ಯಗಳು ಕ್ರೀಡಾಭಿಮಾನಿಗಳನ್ನು ತಲುಪುತ್ತಿರುವುದು ಕ್ರೀಡಾ ನಿರ್ವಹಣೆಗೆ ಹೆಚ್ಚಿನ ಮಹತ್ವ ನೀಡಲು ಸಹಾಯಕವಾಗಿದೆ ಎಂದು ಅಭಿಪ್ರಾಯಿಸಿದರು.

೨೦೧೧ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಕಠಿಣ ಅಭ್ಯಾಸ ನಡೆಸಿದೆ. ಆ ವೇಳೆ ಕೈ ನೋವು ಉಂಟಾಯಿತು. ಆ ಕಷ್ಟದ ನಡುವೆಯೂ ಸ್ಪರ್ಧಿಸಿದೆ. ಆದರೆ ಅಲ್ಲಿ ಸೋಲು ಉಂಟಾಯಿತು ಎಂದು ಸ್ಮರಿಸಿದ ಅವರು, ಯಾವುದೇ ಸಂದರ್ಭದಲ್ಲಿಯೂ ವಿಚಲಿತರಾಗದೇ ಯಶಸ್ಸನ್ನು ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ನಿರ್ದೇಶಕಿ ಡಾ.ಎಚ್.ಗಾಯತ್ರಿ, ಸೆಂಟರ್ ಫಾರ್ ಸ್ಪೋರ್ಟ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಸ್ಥಾಪಕ ಎನ್ರಿಕೊ ಪಿಪೆರ್ನೊ, ಟೆನಿಸ್ ಆಟಗಾರ ಸೋಮ್‌ದೇವ್ ಕಿಶೋರ್ ದೇವವರ್ಮನ್, ವಿಂಗ್ ಕಮಾಂಡರ್ ಅರ್ಜಿತ್ ಘೋಷ್, ಇಂಡಿಯಾ ಬಾಕ್ಸಿಂಗ್ ಕೌನ್ಸಿಲ್ ಅಧ್ಯಕ್ಷ ಬ್ರಿಗೇಡಿಯರ್ ಪಿಕೆಎಂ ರಾಜಾ ಮುಂತಾದವರು ಭಾಗವಹಿಸಿದ್ದರು.